108

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣ ಕಮಕನೂರ ರವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಪ್ರಶ್ನೆ:**

ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಶ್ರೀರಾಂಪುರ ಗ್ರಾಮದ ಸ.ನಂ.124ರಲ್ಲಿ 2 ಎಕರೆ 26 ಗುಂಟೆ ಜಮೀನಿನಲ್ಲಿ, 2 ಎಕರೆ ಜಮೀನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ಅಧಿಸೂಚನೆ ಮೂಲಕ ಸ್ವಾಧೀನಪಡಿಸಿಕೊಂಡಿದ್ದು ಉಳಿಕೆ 26 ಗುಂಟೆ ಸ್ವಾಧೀನಪಡಿಸಿಕೊಳ್ಳದೆ ಇರುವುದನ್ನು ವಿಶೇಷ ಭೂಸ್ವಾಧೀನಾಧಿಕಾರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇವರು ದಿನಾಂಕ:12.10.2013ರಲ್ಲಿ ಹಿಂಬರಹ ನೀಡಿದ್ದು ಈ 26 ಗುಂಟೆ ಜಮೀನು ಶ್ರೀ ಮಹಾದೇವಸ್ವಾಮಿ, ಸರಗೂರು ಗ್ರಾಮ, ಬಿಳಿಗೆರೆ ಹೋಬಳಿ, ನಂಜನಗೂಡು ತಾಲ್ಲೂಕು ಇವರಿಗೆ ಸೇರಿದ್ದು ಇವರ ಹೆಸರಿನಲ್ಲಿ ಗೇಣಿ, ಪಹಣಿ, ಖಾತೆ ಇದ್ದರೂ ಸದರಿ 26 ಗುಂಟೆ ಜಮೀನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವರು ನಿವೇಶನ ಮಾಡಿ ಬೇರೆಯವರಿಗೆ ಹಂಚಿಕೆ ಮಾಡಿ ವಂಚನೆ ಮಾಡಿರುವ ಬಗ್ಗೆ ಮತ್ತು ಜಮೀನು ಕಳೆದುಕೊಂಡ ಭೂ ಮಾಲೀಕರಿಗೆ ಬದಲಿ ಜಮೀನು ನೀಡುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಶ್ರೀರಾಂಪುರ ಗ್ರಾಮದ ಸ.ನಂ.124ರಲ್ಲಿ 2 ಎಕರೆ 26 ಗುಂಟೆ ಜಮೀನಿನ ಪೈಕಿ 2 ಎಕರೆ ಜಮೀನನ್ನು ಪ್ರಾಧಿಕಾರವು ಪರಸ್ಪರ ಒಪ್ಪಂದದ ಮೇರೆಗೆ ಭೂಸ್ವಾಧೀನಪಡಿಸಿಕೊಂಡು ಭೂಮಾಲೀಕರಿಗೆ ಪರಿಹಾರ ಪಾವತಿಸಲಾಗಿರುತ್ತದೆ. ಪ್ರಾಧಿಕಾರದಿಂದ ಶ್ರೀರಾಂಪುರ 3ನೇ ಹಂತದ ಬಡಾವಣೆಯನ್ನು 2003ನೇ ಸಾಲಿನಲ್ಲಿ ಒಟ್ಟು 25.27 ಎಕರೆ ವಿಸ್ತೀರ್ಣದಲ್ಲಿ ಶ್ರೀರಾಮಪುರ ಗ್ರಾಮದ ಸರ್ವೆ ನಂ. 124ರಲ್ಲಿನ ಒಟ್ಟು 2-26ಎಕರೆ ಜಮೀನನ್ನು ಒಳಗೊಂಡಂತೆ ಪೂರ್ಣ ವಿಸ್ತೀರ್ಣದಲ್ಲಿ ಬಡಾವಣೆ ಅಭಿವೃದ್ಧಿಯಾಗಿರುತ್ತದೆ.

ಶ್ರೀರಾಂಪುರ 3ನೇ ಹಂತದ ಬಡಾವಣೆಗಾಗಿ ಸ.ನಂ.124ರಲ್ಲಿನ 2 ಎಕರೆ 26 ಗುಂಟೆ ಜಮೀನಿನ ಪೈಕಿ ಭೂಸ್ವಾಧೀನಪಡಿಸಿಕೊಳ್ಳದೇ ಉಪಯೋಗಿಸಿಕೊಂಡಿರುವ ಪ್ರಸ್ತಾಪಿತ 26 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ ರವರ ಆದೇಶ ಸಂಖ್ಯೆ:ಆರ್.ಪಿ.23/2020, ದಿನಾಂಕ:13.04.2022ರಲ್ಲಿ ಶ್ರೀ ಮಹಾದೇವಸ್ವಾಮಿ ಬಿನ್ ಕೆ. ಮಹಾದೇವಯ್ಯ ರವರ ಹೆಸರಿಗೆ ಖಾತೆ ನಮೂದಿಸಲು ಆದೇಶವಾಗಿದ್ದು, 2022ನೇ ಸಾಲಿನಿಂದ ಇವರಿಗೆ ಹಕ್ಕು ಪ್ರಾಪ್ತಿಯಾಗಿರುತ್ತದೆ.

ಪ್ರಸ್ತುತ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಯ ಸಂಬಂಧ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ವಿಚಾರಣೆ ನಡೆಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 87 ಪಿಸಿಇ 2024, ದಿನಾಂಕ:14.07.2024 ರನ್ವಯ ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಪಿ.ಎನ್. ದೇಸಾಯಿ ರವರ ನೇತೃತ್ವದಲ್ಲಿ ಏಕ ಸದಸ್ಯ ವಿಚಾರಣಾ ಆಯೋಗ ರಚಿಸಿದ್ದು, ಪ್ರಸ್ತುತ ವಿಚಾರಣಾ ಹಂತದಲ್ಲಿರುತ್ತದೆ. ಮಾನ್ಯ ಆಯೋಗದ ವರದಿ ಬಂದ ನಂತರ ಅರ್ಜಿದಾರರಿಗೆ ಪರಿಹಾರ ನೀಡುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಲಾಗುವುದು.

**ಸಂಖ್ಯೆ :ನಅಇ 131 ಮೈಅಪ್ರಾ 2025(ಇ)**

**(ಬಿ.ಎಸ್ ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು